

ಪಡೆದುಕೊಂಡು ಬಂದಿರುವೆ ಎಂದು ತಿಳಿದಾಗ, ತಾತ ನನ್ನನ್ನು ಖುಷಿಯಿಂದ 'ಬಿಗ್ ಬಾಯ್ ಮ್ಯಾನೇಜರ್' ಎಂದು ಕರೆದು, ತಾನು ಈಗ 'ಬಿಗ್ ಬಾಯ್' ಆಗಿದ್ದೇನೆ ಎಂದರು. ಚಿಕ್ಕಂದಿನಲ್ಲಿ, ತಾಯಿ ಮಾಡುತ್ತಿದ್ದ ಕೆಲಸನ್ನು ಈಗ ನಾನು ಮಾಡುತ್ತಿರುವೆನೆಂದು ನನ್ನನ್ನು 'ಬಿಬಿಎಂ ಮಂಜು' ಎಂದು ಕರೆಯಲಾರಂಭಿಸಿದರು.

ತಿಂಗಳಿಗೊಮ್ಮೆ ಬಂದು ನೋಡಿಕೊಂಡು ಹೋಗುವೆ ಎಂದು ಭರವಸೆ ಕೊಟ್ಟ ಮಗ ಹೊರದೇಶಕ್ಕೆ ಹೊರಟ ನಂತರ, ನಾನು ಮತ್ತು ತಾತನ ನಡುವೆ ಬಾಂಧವ್ಯ ಬೆಳೆಯಿತು. ನಾವಿಬ್ಬರು ಒಂದು ನೆಂಟಸ್ತಿಕೆಯನ್ನು ಶುರು ಹಚ್ಚಿಕೊಂಡೆವು. ಆರೋಗ್ಯ ಸ್ವಲ್ಪ ಚೇತರಿಸಿಕೊಂಡ ಮೇಲೆ, ತಾತ, ಅಟ್ಟದಲ್ಲಿ ಇದ್ದ ತಮ್ಮ ಪೆಟ್ಟಿಗೆಯನ್ನು ಕೆಳಗೆ ಇಳಿಸಿಕೊಂಡು ದಿನವೂ ಸ್ವಲ್ಪ ಸಮಯ ಹಳೆಯ ಕಡತಗಳನ್ನು ನೋಡಿ, ಬ್ಯಾಂಕ್ ಪಾಸ್‌ಬುಕ್‌ಗಳನ್ನೂ ತಿರುವಿ ಹಾಕಿ ಇಡುತ್ತಿದ್ದರು.

ದಿನಚರಿ ಒಂದೇ ಸಮನೆ ಎಂಟು - ಹತ್ತು ದಿನ ಓಡಿತು. ಒಂದು ದಿನ ಬೆಳಗ್ಗೆ, ವೆರಾಂಡದಲ್ಲಿ ಕುಳಿತು ಮೂಲೆ ಮನೆಯ ಅವರ ಮಗನ ಸ್ನೇಹಿತ ರಮೇಶ್ ಅವರನ್ನು ಕರೆತರಲು ಹೇಳಿದರು. ರಮೇಶ್ ಅವರು ಬಂದು ಮಾತನಾಡಿ, ಮತ್ತೆ ಬ್ಯಾಂಕಿಗೆ ಕರೆದುಕೊಂಡು ಹೋಗುವುದಾಗಿ ಹೇಳಿದರು.

ಬ್ಯಾಂಕ್‌ನಿಂದ ರಮೇಶ್ ಅಂಕಲ್ ತಂದ ಚೀಲವನ್ನು ತಾತ ಮಂಚದ ಮೇಲೆ ಮತ್ತೊಮ್ಮೆ ತೆಗೆದು ನೋಡಿದರು. ಐನೂರರ ನೋಟುಗಳ ನಾಲ್ಕು ದೊಡ್ಡ ಕಟ್ಟಿತ್ತು. ನೋಡುತ್ತಲೇ ತಲೆ 'ಗಿರ್' ಎಂದು ತಿರುಗಿತು. ಅಬ್ಬಾ ಎಷ್ಟೊಂದು ಹಣ! ಇದರಲ್ಲಿ ತಂಗಿಯ ಫೀಸು, ಮನೆ